O.S. No. 222-2013
D.W. - 2

**<u>ದಿನಾಂಕಃ 06-07-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.</u>**

***<u>ಪಾಟೀ ಸವಾಲುಃ ಶ್ರೀ ಜಿ ಎ ಜಿ ., ಮಾನ್ಯ ವಕೀಲರಿಂದ 2, 3, 4, 8 ಮತ್ತು ೨ ನೇ ಪ್ರತಿವಾದಿಗಳ ಪರವಾಗಿಃ-</u>***

ಈಗ ನನ್ನ ವಯಸ್ಸು 72 ವರ್ಷ. 1959 ರಲ್ಲಿ ನನ್ನ ವಯಸ್ಸು ಎಷ್ಟು ಇತ್ತ ನನಗೆ ಹೇಳಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿಯ ವಿಷಯವನ್ನು ನಾನೇ ಹೇಳಿ ಬರೆಸಿರುತ್ತೇನೆ. ನಾನು ನನ್ನ ಮದುವೆಗಿಂತ ಮೊದಲೂ ರಾಯಚೂರಿನಲ್ಲಿ ವಾಸವಿದ್ದೆ. 1959 ರಲ್ಲಿ ರಾಜಿ ಮಾಡಿಕೊಂಡ ವಿಷಯವನ್ನು ನನಗೆ ಪ್ರತಿವಾದಿ ನಂಬರ 3 ಮತ್ತು 4 ಹೇಳಿರುತ್ತಾರೆ. ನನಗೆ ಪ್ರಥಮ ಬಾರಿಗೆ 1959 ರಲ್ಲಿ ರಾಜಿಯಾದ ವಿಷಯ ಯಾವಾಗ ಗೊತ್ತಾಯಿತು ಅನ್ನುವ ದಿನಾಂಕ ಮತ್ತು ಇಸವಿ ಹೇಳಲು ಬರುವುದಿಲ್ಲ. 1959 ರಲ್ಲಿ ಪ್ರತಿವಾದಿ ನಂಬರ 3 ಮತ್ತು 4 ಹುಟ್ಟಿರಲಿಲ್ಲ ಎಂದರೆ ಸಾಕ್ಷಿದಾರರು ಅವರು ಹುಟ್ಟಿದ ವರ್ಷ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ.

( ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ವಿನಂತಿ ಮೇರೆಗೆ ಪಾಟೀ ಸವಾಲುನ್ನು ಮುಂದೂಡಲಾಯಿತು. )

**( ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಖ್ತಲೇಖನೆಯ ಮೇರೆಗೆ ಬೆರಳಚ್ಚುಗಾರರು ಬೆರಳಚ್ಚು ಮಾಡಿರುತ್ತಾರೆ ಮತ್ತು ಅದನ್ನು ಸಾಕ್ಷಿಗೆ ಓದಿ ತಿಳಿಸಿ ಹೇಳಿದಾಗ ಸಾಕ್ಷಿ ಸರಿ ಇದೆ ಅಂತಾ ಒಪ್ಪಿ ಕೊಂಡಿರುತ್ತಾರೆ.)**

1 **ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು,**
**ರಾಯಚೂರು.**